ತಂದೆ ಹೇಗೆ ಜೀವ ಬಿಟ್ಟಿರಬೇಕೆಂದು ದುಃಖಿಸುತ್ತದೆ. ತಾಯಿ ತಂದೆಯರನ್ನು ಕಳೆದುಕೊಂಡ ದುಃಖದಲ್ಲಿ ಯಾರಿಗೂ ಹೆದರದಂಥ ಧೈರ್ಯ ಅದರಲ್ಲಿ ತಂತಾನೆ ಬಂದುಬಿಟ್ಟಿದ್ದ ಕಾರಣ ನಿಧಾನವಾಗಿ ನಡೆದು, ಆ ಕಡೆ, ಈ ಕಡೆ ಹುಡುಕಾಡಿ, ಕೊನೆಗೆ ಪುಣ್ಯಕೋಟಿಯ ಎದುರು ಬಂದು ನಿಲ್ಲುತ್ತದೆ. ಅದನ್ನು ನೋಡಿದ ಪುಣ್ಯಕೋಟಿಯ ಕರು ಹೆದರಿ ತನ್ನಮ್ಮನ ಕಾಲ ಸಂಧಿಯಲ್ಲಿ ಅಡಗಿ ಕೆಚ್ಚಲಿಗೆ ಬಾಯಿ ಹಾಕುತ್ತದೆ. "ತನ್ನ ತಾಯಿ ಬದುಕಿದ್ದಿದ್ದರೆ ತಾನೂ ಹೀಗೇ ಮೊಲೆಗೆ ಬಾಯಿಟ್ಟು ಸಂತೋಷದಿಂದ ಹಾಲು ಕುಡಿಯುತ್ತಿದ್ದೆ, ಈಗ ತಾಯಿಯ ಹಾಲೂ ಇಲ್ಲ, ತಂದೆ ತಂದು ಕೊಡುತ್ತಿದ್ದ ಮಾಂಸದ ತುಂಡೂ ಇಲ್ಲ!! ನನ್ನದೆಂಥ ಅನಾಥ ಸ್ಥಿತಿ!! ನನಗೇಕೆ ಈ ತಬ್ಬಲಿತನ? ಯಾಕೆ ನನಗೆ ಈ ಶಿಕ್ಷೆ?" ಹೀಗೆ ದುಃಖಿಸುತ್ತ ಹೊಟ್ಟೆಯ ಸಂಕಟವನ್ನು ಪುಣ್ಯಕೋಟಿಯೆದುರು ತೋಡಿಕೊಳ್ಳತೊಡಗಿತು ಹುಲಿಮರಿ.

ಪುಣ್ಯಕೋಟಿ ತಾಯಿಯಮ್ಮ
ನಿನ್ನ ಪುಣ್ಯದ ಕಥೆಯು ದೊಡ್ಡದು!
ನಿನ್ನ ಸತ್ಯಕೆ ಅಪ್ಪ ಸತ್ತನು
ಏನು ನನ್ನ ಪಾಪವು?

ಹಂದಿ ನಾಯಿ ಹಾವು ಹಲ್ಲಿಗೆ
ತಮ್ಮ ಕಂದರೆ ಪ್ರಾಣ ಜೀವ,
ನಿನ್ನ ಕಂದನು ಮಾತ್ರ ಶ್ರೇಷ್ಠವೆ
ಉಳಿದುವೆಲ್ಲ ಕನಿಷ್ಠವೆ?

ತಾಯಿಯಿಲ್ಲ ತಂದೆಯಿಲ್ಲ
ಕಾಯುವವರು ಯಾರು ಇಲ್ಲ,
ಕ್ರೂರ ಹುಲಿಮರಿ ಎಂದು ಎಲ್ಲರು
ಹೊಡೆದು ಓಡಿಸಿ ಬಿಡುವರು.

ಐದು ಹಗಲು ನಾಲ್ಕು ರಾತ್ರಿ
ಉಣ್ಣದಿಹ ಈ ಹೊಟ್ಟೆ ನೋಡು,
ಆಸರಿಲ್ಲದೆ ಅಲೆಯುತಿಹೆನು
ಏಸು ದಿನ ಈ ಬವಣೆಯು?

ಪಾಪ ಮಾಡದೆ ಅಪ್ಪ ಸತ್ತನು
ಪುಣ್ಯ ಯಾರಿಗೆ ನೀನು ಹೇಳು,
ಯಾರು ತಬ್ಬಲಿ? ಜಗವೆ ಹೇಳಲಿ
ನಾನೊ, ನಿನ್ನ ಕಂದನೋ?

ಕಾಳಿಂಗಜ್ಜ ಹಾಡುತ್ತಿದ್ದ ಲಯ–ಧಾಟಿಯಲ್ಲೇ ತನ್ನಳಲು ತೋಡಿಕೊಳ್ಳುತ್ತಿದ್ದ ಹುಲಿಮರಿಯ ರೀತಿ ಪುಣ್ಯಕೋಟಿಗೆ ದಿಗಿಲೆನಿಸತೊಡಗಿತು. 'ಹಾಡೇನೋ ಸರಿ, ಆದರೆ, ಕಾಳಿಂಗಜ್ಜನ ಹಾಡುಗಳಲ್ಲಿ